ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪದಿಂದುಂಟಾದ ನಷ್ಟ

91 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92,1992-93,ಮತ್ತು 1993-94ರ ಸಾಲುಗಳಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ಒಟ್ಟು ನಷ್ಟವೆಷ್ಟು?

ಆ) ಈ ಸಾಲುಗಳಲ್ಲಿ ರಾಜ್ಯ: ಸರ್ಕಾರ ಬಿಡುಗಡೆ ಮಾಡಿದ ಪರಿಹಾರದ ಮೊತ್ತವೆಷ್ಟು?

ಇ) ಸಾರ್ವಜನಿಕ ನಷ್ಟ ಎಷ್ಟು ಹಾಗೂ ಖಾಸಗಿಗೆ ಸಂಬಂಧಿಸಿದ ನಷ್ಟವೆಷ್ಟು ಹಾಗೂ ಒದಗಿಸಿದ ಪರಿಹಾರವೆಷ್ಟು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 1991-92ರಿಂದ 1993-94ರವರೆಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪದಿಂದಾದ ನಷ್ಟ ಈ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಖಾಸಗಿ ಆಸ್ತಿಗಳಿಗೆ	ಸಾರ್ವಜನಿಕ ಆಸ್ತಿಗಳಿಗೆ	ಒಟ್ಟು
1991-92	3.82	5.80	9.62
1992-93	2.45	5.92	8.37
1993-94	0.12	3.40	3.52
ಒಟ್ಟು:	6.39	15.12	21.51

ಆ) ಮತ್ತು ಇ) ಸಾಲುಗಳಲ್ಲಿ ತೀರ್ಥಹಳ್ಳಿ ತಾಲ್ಲೂಕಿಗೆ ಬಿಡುಗಡೆ ಮಾಡಿದ ಪರಿಹಾರದ ಮೊತ್ತ ಈ ಕೆಳಕಂಡಂತೆ ಇರುತ್ತದೆ -

(ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಖಾಸಗಿ ಆಸ್ತಿಪಾಸ್ತಿಗಳ ಪರಿಹಾರಕ್ಕಾಗಿ	ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ದುರಸ್ಥಿಗಾಗಿ	ಒಟ್ಟು
1991-92	2.80	4.624	7.424
1992-93	1.50	4.72	6.220
1993-94	0.50	2.58	3.080
ಒಟ್ಟು:	4.80	11.924	16.724

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ಮೂರು ಸಾಲುಗಳಲ್ಲಿ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಾದ ಹಾನಿ ಮತ್ತು ಒದಗಿಸಿದ ಪರಿಹಾರ ಈ ಕೆಳಕಂಡಂತಿರುತ್ತದೆ-

(ರೂ. ಲಕ್ಷಗಳಲ್ಲಿ)

ಖಾಸಗಿ ಆಸ್ತಿ		ಸಾರ್ವಜನಿಕ ಆಸ್ತಿಪಾಸ್ತಿ		ಒಟ್ಟು	
ಅಂದಾಜು ನಷ್ಟ	ಒದಗಿಸಿದ ಪರಿಹಾರ	ಅಂದಾಜು ನಷ್ಟ	ದುರಸ್ತಿಗಾಗಿ ಒದಗಿಸಲಾದ ಹಣ	ಅಂದಾಜು ನಷ್ಟ	ಒದಗಿಸಿದ ಪರಿಹಾರ
6.39	3.20	15.12	11.92	21.51	15.12